ತರೀಕೆರೆ ತಾಲ್ಲೂಕಿನಲ್ಲಿ ದಾದಿಯರ ವಸತಿಗೃಹಗಳು

730 (807) ಶ್ರೀ ನೀಲಕಂಠಪ್ಪ ಬಿ. ಆರ್. (ತರಿಕೆರೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ದಾದಿಯರ ವಸತಿ ಗೃಹ ಮತ್ತು ಎ.ಎಸ್. ಎಂ. ಕೇಂದ್ರಗಳಿವೆ.

ಆ) ತರೀಕೆರೆ ತಾಲ್ಲೂಕಿನಲ್ಲಿ ಇನ್ನೂ ಎ.ಎನ್. ಎಂ. ಕೇಂದ್ರಗಳು ಬೇಕಾಗಿರುವುದು ಸರ್ಕಾರದ ಕೇಂದ್ರಗಳು ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇವುಗಳನ್ನು ಯಾವಾಗ ಒದಗಿಸಲಾಗುವುದು?

ಇ) ತರೀಕೆರೆ ತಾಲ್ಲೂಕು 1) ಬಗ್ಗವಳ್ಳಿ 2) ಬೇಲೇನಹಳ್ಳಿ 3) ಬಾವಿಕೆರೆ 4) ಎಂ.ಸಿ. ಹಳ್ಳಿ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರಂಭಿಸಲು ಜಿಲ್ಲಾ ಪಂಚಾಯತಿಯಿಂದ ಶಿಫಾರಸ್ಸು ಏನಾದರೂ ಸರ್ಕಾರಕ್ಕೆ ಬಂದಿದೆಯೇ; ಹಾಗಿದ್ದರೆ ಯಾವಾಗ ಅವುಗಳನ್ನು ಆರಂಭಿಸಲಾಗುವುದು?

ಡಾ॥ ಎ. ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ತರೀಕೆರೆ ತಾಲ್ಲೂಕಿನಲ್ಲಿ ಒಟ್ಟು 6 ಆರೋಗ್ಯ ಉಪಕೇಂದ್ರಗಳು ಇದ್ದು ಅವುಗಳಲ್ಲಿ 3 ಆರೋಗ್ಯ ಉಪಕೇಂದ್ರಗಳಿಗೆ ವಸತಿ ಗೃಹಗಳು ಇರುತ್ತದೆ.

ಆ) ಅವಶ್ಯಕತೆಗಿಂತ ಹೆಚ್ಚಾಗಿ ಆರೋಗ್ಯ ಉಪ ಕೇಂದ್ರಗಳು ಇರುವುದರಿಂದ ಹೆಚ್ಚುವರಿಯಾಗಿ ಮಂಜೂರು ಮಾಡುವ ಅವಶ್ಯಕತೆ ಕಂಡು ಬರುವುದಿಲ್ಲ.

ಇ) ಬಗ್ಗವಳ್ಳಿ ಗ್ರಾಮಕ್ಕೆ ಮಾತ್ರ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲು ಜಿಲ್ಲಾ ಪಂಚಾಯತ್ ಅನುಮೋದನೆಯೊಂದಿಗೆ ಪ್ರಸ್ತಾವನೆ ಬಂದಿದೆ. ಕೇಂದ್ರ ಸರ್ಕಾರವು 2000-01 ನೇ ಸಾಲಿನಲ್ಲಿ ಪ್ರಾ. ಆ. ಕೇಂದ್ರ ಸ್ಥಾಪಿಸಲು ಶೂನ್ಯ ಗುರಿ ನಿಗದಿ ಪಡಿಸಿರುವುದರಿಂದ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡುವ ಯೋಜನೆ ಇರುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಪ್ರೌಢಶಾಲೆಗಳು

731 (808) ಶ್ರೀ ನೀಲಕಂಠಪ್ಪ (ತರೀಕೆರೆ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಪ್ರೌಢಶಾಲೆಗಳಿವೆ?

ಆ) ಈ ಎಲ್ಲಾ ಶಾಲೆಗಲ್ಲಿ ಸರ್ಕಾರದ ನಿಗಧಿಪಡಿಸಿದ ವಿದ್ಯಾರ್ಥಿಗಳು ಇದ್ದಾರೆಯೇ?

ಇ) ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇರುವ ಶಾಲೆಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಲಾಗುವುದೇ?